# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 814 |
| 2) | ಸದಸ್ಯರ ಹೆಸರು | : | ನಿರಾಣಿ ಹಣಮಂತ್ ರುದ್ರಪ್ಪ |
| 3) | ಉತ್ತರಿಸಬೇಕಾದ ದಿನಾಂಕ: | : | 20.02.2024 |
| 4) | ಉತ್ತರಿಸುವವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಳಗಾವಿಯಿಂದ –ಧಾರವಾಡ ಹಾಗೂ ಕುಡಚಿಯಿಂದ-ಬಾಗಲಕೋಟೆ ರೈಲ್ವೆ ಮಾರ್ಗಗಳ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆಯೇ;<br>ಪ್ರಾರಂಭಿಸಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗಿದೆ; ಈ ಕುರಿತು ಸಂಪೂರ್ಣ ಮಾಹಿತಿ ನೀಡುವುದು; | **1) ಧಾರವಾಡ-ಕಿತ್ತೂರು-ಬೆಳಗಾವಿ ನೂತನ ರೈಲು ಮಾರ್ಗ ಯೋಜನೆ :**<br>ಧಾರವಾಡ-ಕಿತ್ತೂರು-ಬೆಳಗಾವಿ ನೂತನ ರೈಲುಮಾರ್ಗ (73 ಕಿ.ಮೀ) ಯೋಜನೆಯ ಕಾಮಗಾರಿಯ ವೆಚ್ಚದ ರೂ.927.40 ಕೋಟಿಗಳಲ್ಲಿ ಶೇ.50ರಷ್ಟು ಹಾಗೂ ಭೂಸ್ವಾಧೀನ ವೆಚ್ಚದ ಸಂಪೂರ್ಣ ವೆಚ್ಚವನ್ನು ರಾಜ್ಯ ಸರ್ಕಾರವು ಭರಿಸಲು ಒಪ್ಪಿಗೆ ನೀಡಿ ಈ ಯೋಜನೆಗೆ ರಾಜ್ಯ ಸರ್ಕಾರದಿಂದ ದಿನಾಂಕ:23.12.2021ರಲ್ಲಿ ಅನುಮೋದನೆ ನೀಡಲಾಗಿದೆ. ಈ ಯೋಜನೆಗೆ 888.36 ಎಕರೆಗಳ ಭೂಸ್ವಾಧೀನದ ಅಗತ್ಯವಿದ್ದು, ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ.<br>**2) ಬಾಗಲಕೋಟೆ- ಕುಡಚಿ ನೂತನ ರೈಲು ಮಾರ್ಗ ಯೋಜನೆ :**<br>ಕುಡಚಿ-ಬಾಗಲಕೋಟೆ ರೈಲ್ವೆ ಮಾರ್ಗ (142 ಕಿ.ಮೀ) ಯೋಜನೆಯ ಕಾಮಗಾರಿಯ ವೆಚ್ಚದ ಶೇ.50ರಷ್ಟು ಹಾಗೂ ಭೂಸ್ವಾಧೀನ ವೆಚ್ಚದ ಸಂಪೂರ್ಣ ವೆಚ್ಚವನ್ನು ರಾಜ್ಯಸರ್ಕಾರವು ಭರಿಸಲು ಒಪ್ಪಿಗೆ ನೀಡಿ ಈ ಯೋಜನೆಗೆ ರಾಜ್ಯ ಸರ್ಕಾರದಿಂದ 2011ರಲ್ಲಿ ಅನುಮೋದನೆ ನೀಡಲಾಗಿದೆ. ಈ ಯೋಜನೆಯ ಭಾಗದ ಬಾಗಲಕೋಟೆ-ಖಜ್ಜಿಡೋಣಿ (30ಕಿ.ಮೀ) ಕಾಮಗಾರಿಯು 2018ರಲ್ಲಿ ಪೂರ್ಣಗೊಂಡಿದ್ದು, ರೈಲು ಸಂಚಾರ ಆರಂಭಗೊಂಡಿದೆ. ಖಜ್ಜಿಡೋಣಿ-ಲೋಕಾಪುರ (9 ಕಿ.ಮೀ) ಸೆಕ್ಷನ್ ಕಾಮಗಾರಿಯು ಪ್ರಗತಿಯಲ್ಲಿದೆ. |

| | | |
|---|---|---|
| (ಆ) | ಸದರಿ ಕಾಮಗಾರಿಗಳನ್ನು ಪ್ರಾರಂಭಿಸದಿದ್ದಲ್ಲಿ ಆಗಿರುವ ವಿಳಂಬಕ್ಕೆ ಕಾರಣಗಳೇನು; ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಇದೆಯೆ; ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು; | 1) **ಧಾರವಾಡ-ಕಿತ್ತೂರು-ಬೆಳಗಾವಿ ನೂತನ ರೈಲು ಮಾರ್ಗ ಯೋಜನೆ :**<br><br>ಈ ಯೋಜನೆಗೆ ಅಗತ್ಯವಿರುವ ಜಮೀನಿನ ಸ್ವಾಧೀನ ಪ್ರಕ್ರಿಯೆ ಪ್ರಾಥಮಿಕ ಹಂತದಲ್ಲಿದ್ದು, ಜನ ಪ್ರತಿನಿಧಿಗಳು ಮತ್ತು ಭೂ ಮಾಲೀಕರು ಕೆಲವೆಡೆ ಭೂಸ್ವಾಧೀನವನ್ನು ವಿರೋಧಿಸಿ ರೈಲ್ವೆ ಮಾರ್ಗ ಹಾದುಹೋಗುವ ಪಥದ ಬದಲಾವಣೆಗೆ ಒತ್ತಾಯಿಸುತ್ತಿದ್ದು, ನೈರುತ್ಯ ರೈಲ್ವೆಯು ತಾಂತ್ರಿಕವಾಗಿ ಪಥದ ಜೋಡಣೆಯನ್ನು ಬದಲಾಯಿಸುವುದು ಕಾರ್ಯಸಾಧ್ಯವಲ್ಲ ಎಂದು ತಿಳಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಭೂಸ್ವಾಧೀನ ಪ್ರಕ್ರಿಯೆ ವಿಳಂಬವಾಗಿರುತ್ತದೆ.<br><br>2) **ಬಾಗಲಕೋಟೆ- ಕುಡಚಿ ನೂತನ ರೈಲು ಮಾರ್ಗ ಯೋಜನೆ :**<br>1) ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರ ಒತ್ತಾಯದ ಮೇರೆಗೆ ಬಾಗಲಕೋಟೆ ಜಿಲ್ಲೆಯ ಲೋಕಾಪುರ ಬಳಿಯ ಹಳಿಯ ಮಾರ್ಗ (ಅಲೈನ್ ಮೆಂಟ್)ವನ್ನು 3 ಬಾರಿ ಮಾರ್ಪಡಿಸಿರುವುದು ಹಾಗೂ ಗಣಿ ಮಾಲೀಕರು ನೀಡಿರುವ ಕೋರಿಕೆಯ ಮೇರೆಗೆ ಲೋಕಾಪುರ ಬಳಿ ಖಜ್ಜಿದೋಣಿ - ಯಾದವಾಡ ನಡುವಿನ ಸುಣ್ಣದ ಕಲ್ಲು ಮತ್ತು ಡಾಲಮೈಟ್ ಗಣಿಗಳನ್ನು ಹಾದು ಹೋಗುತ್ತಿದ್ದು, ಇದನ್ನು ತಪ್ಪಿಸಿ ಹೊಸ ಅಲೈನ್ ಮೆಂಟ್‌ನ್ನು ಗುರುತಿಸಿ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಲು ಸುಮಾರು 2.1/2 ವರ್ಷಗಳು ವಿಳಂಬವಾಗಿರುತ್ತದೆ.<br>2) 2013ರಲ್ಲಿ ಜಾರಿಯಾದ ನೂತನ ಭೂಸ್ವಾಧೀನ ಕಾಯ್ದೆ ಅನುಸಾರ ಹೊಸದಾಗಿ ಭೂಸ್ವಾಧೀನ ಪ್ರಕ್ರಿಯೆ ಆರಂಭಿಸಬೇಕಾದದ್ದು.<br>3) ಭೂಸ್ವಾಧೀನ ಪ್ರಕ್ರಿಯೆ ಕುರಿತಂತೆ ನ್ಯಾಯಾಲಯಗಳಲ್ಲಿ ಹೂಡಲಾಗುವ ಮೊಕದ್ದಮೆಗಳಿಂದ ಭೂಸ್ವಾಧೀನ ಪ್ರಕ್ರಿಯೆ ವಿಳಂಬಗೊಂಡಿರುವುದು. |

ಈ ಎರಡು ಯೋಜನೆಗಳ ಅಂದಾಜು ಮೊತ್ತ ಈ ಕೆಳಕಂಡಂತಿದೆ.

| ಕ್ರ ಸಂ | ನೂತನ ರೈಲು ಮಾರ್ಗ ಯೋಜನೆಯ ಹೆಸರು | ಅಂದಾಜು ಮೊತ್ತ | ರೈಲ್ವೆ ಪಾಲು | ರಾಜ್ಯ ಸರ್ಕಾರದ ಪಾಲು |
|---|---|---|---|---|
| 1. | ಧಾರವಾಡ-ಕಿತ್ತೂರು-ಬೆಳಗಾವಿ | 927.40* | 389.57 | 537.83* |
| 2. | ಬಾಗಲಕೋಟೆ-ಕುಡಚಿ | 1530.09* | 926.31 | 603.78* |

(ಭೂಸ್ವಾಧೀನ ಪರಿಹಾರ ವೆಚ್ಚ ಹೊರತುಪಡಿಸಿ) ಭೂಸ್ವಾಧೀನ ಪರಿಹಾರದ ಸಂಪೂರ್ಣ ಹೊಣೆಗಾರಿಕೆ ರಾಜ್ಯ ಸರ್ಕಾರದಾಗಿರುತ್ತದೆ.

(ಇ) ಸದರಿ ಕಾಮಗಾರಿಗಳ ಅನುಷ್ಠಾನದ ಮೊತ್ತವೆಷ್ಟು: ಕಾಮಗಾರಿಗಳನ್ನು ಕೈಗೊಳ್ಳಲು ಅನುಮತಿ ಪಡೆದ ಸಂಸ್ಥೆ ಯಾವುವು; ಸದರಿ ಕಾಮಗಾರಿಗಳು ಪ್ರಸ್ತುತ ಯಾವ ಹಂತದಲ್ಲಿವೆ ಮತ್ತು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು?

**<u>ಧಾರವಾಡ-ಕಿತ್ತೂರು-ಬೆಳಗಾವಿ ನೂತನ ರೈಲು ಮಾರ್ಗ ಯೋಜನೆ :</u>**

ಈ ಯೋಜನೆ ಭೂಸ್ವಾಧೀನ ಪ್ರಕ್ರಿಯೆಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ವಹಿಸಲಾಗಿದ್ದು, ನಿರ್ಮಾಣ ಕಾಮಗಾರಿಯನ್ನು ರೈಲ್ವೆ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಭೂಸ್ವಾಧೀನ ಪ್ರಕ್ರಿಯೆ ಪ್ರಾಥಮಿಕ ಹಂತದಲ್ಲಿರುವುದರಿಂದ ಇನ್ನೂ ಕಾಮಗಾರಿ ಪ್ರಾರಂಭಗೊಂಡಿರುವುದಿಲ್ಲ. ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡನಂತರ ಕಾಮಗಾರಿಯ ಕಾಲಮಿತಿಯನ್ನು ನಿಗಧಿಪಡಿಸಲಾಗುವುದು.

**<u>ಬಾಗಲಕೋಟೆ- ಕುಡಚಿ ನೂತನ ರೈಲು ಮಾರ್ಗ ಯೋಜನೆ:</u>**

ಈ ಯೋಜನೆಯ ಭೂಸ್ವಾಧೀನ ಪ್ರಕ್ರಿಯೆಯನ್ನು ಸಂಬಂಧಪಟ್ಟ ಜಿಲ್ಲಾಡಳಿತಕ್ಕೆ ವಹಿಸಲಾಗಿದ್ದು, ನಿರ್ಮಾಣ ಕಾಮಗಾರಿಯನ್ನು ರೈಲ್ವೆ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿದೆ.

1) ರಾಜ್ಯ ಸರ್ಕಾರದಿಂದ ಈ ನೂತನ ರೈಲು ಮಾರ್ಗದ ಕ್ಷಿಪ್ರ ಅನುಷ್ಠಾನಕ್ಕಾಗಿ ಭೂಸ್ವಾಧೀನ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಂಡು ಶೇಕಡ 95%ಕ್ಕೂ ಹೆಚ್ಚು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ.

| | | |
|---|---|---|
| | | 2) ನೈರುತ್ಯ ರೈಲ್ವೆಯು ಬಾಗಲಕೋಟೆ-ಖಜ್ಜಿಡೋಣಿ ನಡುವಿನ 30ಕಿ.ಮೀ ಕಾಮಗಾರಿಯನ್ನು 2018ರಲ್ಲಿ ಪೂರ್ಣಗೊಳಿಸಿ, ಖಜ್ಜಿದೋಣಿ-ಲೋಕಾಪುರ (9 ಕಿ.ಮೀ) ಸೆಕ್ಷನ್‌ನ ಕಾಮಗಾರಿಯನ್ನು ಜೂನ್ 2024ರ ಅಂತ್ಯದ ವೇಳೆಗೆ ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದೆ.<br>3) ಲೋಕಾಪುರ–ಯಾದವಾಡ (21 ಕಿ.ಮೀ) ಸೆಕ್ಷನ್‌ನ ಕಾಮಗಾರಿಗಾಗಿ ಟೆಂಡರ್‌ನ್ನು ಕರೆಯಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಯಾದವಾಡ-ಜಗದಾಲ್ ರಸ್ತೆ (45 ಕಿ.ಮೀ) ಸೆಕ್ಷನ್ ಟೆಂಡರ್ ಅನ್ನು ಕರೆಯಲು ನಿರ್ಧರಿಸಲಾಗಿದೆ.<br>4) ಜಗದಾಲ್ ರಸ್ತೆ-ಹರುಗೇರಿ-ಕುಡಚಿ (37 ಕಿ.ಮೀ) ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಜಮೀನು ಹಸ್ತಾಂತರವಾದ ನಂತರ ಕಾಮಗಾರಿಗಾಗಿ ಟೆಂಡರ್ ಕರೆಯಲಾಗುವುದು ಎಂದು ನೈರುತ್ಯ ರೈಲ್ವೆ ಇಲಾಖೆಯು ತಿಳಿಸಿದೆ.<br>5) ಈ ಯೋಜನೆಯಲ್ಲಿ ಒಟ್ಟು 74-36 ಎಕರೆಗಳ ನ್ಯಾಯಾಲಯಗಳ ಪ್ರಕರಣದಲ್ಲಿ ಮಾನ್ಯ ಉಚ್ಛನ್ಯಾಯಾಲಯ, ಧಾರವಾಡ ಪೀಠವು ನೀಡಿರುವ ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮವಹಿಸಲಾಗುತ್ತಿದೆ.<br>6) ಈ ಯೋಜನೆಯನ್ನು 2027ರೊಳಗೆ ಪೂರ್ಣಗೊಳಿಸಲು ಗುರಿಯನ್ನು ಹೊಂದಲಾಗಿದೆ. |

ಸಂಖ್ಯೆ: ಮೂಲಅಇ 33 ರಾರಾಹೆ 2024/ಇ

**(ಎಂ.ಬಿ.ಪಾಟೀಲ)**
ಮಾನ್ಯಬೃಹತ್ ಮತ್ತುಮಧ್ಯಮಕೈಗಾರಿಕೆ
ಹಾಗೂಮೂಲಸೌಲಭ್ಯಅಭಿವೃದ್ಧಿಸಚಿವರು .